ದಿನಾಂಕಃ **27-03-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಎನ್. ಆರ್. ಕೆ ವಕೀಲರಿಂದಃ

1. ನಾನು ಗೌಂಡಿ ಕೆಲಸ ಮಾಡುತ್ತೇನೆ. ನಾನು ಯಾದಗಿರಿ ಹಾಗೂ ಮುಂಬೈ ಮತ್ತು ಬೇರೆ ಎಲ್ಲಾ ಸ್ಥಳಗಳಲ್ಲಿ ಗೌಂಡಿ ಕೆಲಸ ಮಾಡುತ್ತೇನೆ. ಅರ್ಜಿದಾರ ನನ್ನ ಸ್ವಂತ ಅಣ್ಣ ಆಗಿರುತ್ತಾರೆ. ಎದುರುದಾರರು ನನ್ನ ದೊಡ್ಡಪ್ಪನ ಮಕ್ಕಳಾಗಿರುತ್ತಾರೆ. ಅರ್ಜಿದಾರ ಸನಃ 2020 ರಲ್ಲಿ ಎದುರುದಾರರ ವಿರುದ್ಧ ದಾವೆ ದಾಖಲು ಮಾಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ನಮಗೆ ಸೇರಿದ ಜಾಗದಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸನಃ 2020 ರಲ್ಲಿ ಎದುರುದಾರರು ಮನೆ ಕಟ್ಟಲು ಪ್ರಾರಂಭಿಸಿದಾಗ ಅರ್ಜಿದಾರ ದಾವೆ ದಾಖಲು ಮಾಡಿದ್ದನು ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಕಟ್ಟಡ ಕಟ್ಟದಂತೆ ಆದೇಶ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಎದುರುದಾರರಿಗೆ ನ್ಯಾಯಾಲಯದ ನೋಟಿಸು ಜಾರಿಯಾಗಿತ್ತು ಎಂದರೆ ಸಾಕ್ಷಿ ಮನೆಯ ಕಟ್ಟಡ ಮುಗಿದ ನಂತರ ಜಾರಿಯಾಗಿತ್ತು ಎಂದು ನುಡಿಯುತ್ತಾರೆ. ಎದುರುದಾರರು ಯಾವ ವರ್ಷದಲ್ಲಿ ಕಟ್ಟಡ ಪ್ರಾರಂಬಿಸಿದ್ದರು ಎಂದರೆ ಸಾಕ್ಷಿ ನಾನು ಹೆಚ್ಚಾಗಿ ಮುಂಬೈಯಲ್ಲಿ ಇರುವುದರಿಂದ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಮುಂಬೈಯಲ್ಲಿ ಇರುವುದರಿಂದ ದಾವೆ ದಾಖಲು ಮಾಡಿದ ಬಗ್ಗೆಯೂ ಸಹ ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಅಸ್ತಿಯನ್ನು ರಕ್ಷಿಸಲು ವಾದಿ ದಾವೆ ದಾಖಲಿಸಿದ್ದರು ಎಂದರೆ ಸಾಕ್ಷಿ ನಾವು ಮೂರು ಜನ ಸಹೋದರರು ಇದ್ದು ಎಲ್ಲರೂ ಸೇರಿ ಬಗೆಹರಿಸಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ.

2. ಎದುರುದಾರರು ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿ ಕಟ್ಟಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ಅರ್ಜಿದಾರ ಮೋಸ ಮಾಡಿರುತ್ತಾರೆ ಎಂದು ನಾನು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಸಾಕ್ಷಿಗೆ ಅವರ ಸಾಕ್ಷ್ಯ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ಬರೆದಿರುವ

ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನನಗೆ ಇಂಗ್ಲಿಷ ಓದಲು ಬರುವುದಿಲ್ಲ ಹಾಗಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿದ್ದರೂ ಸಹ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ನಮ್ಮ ಅಸ್ತಿಯಲ್ಲಿ ಮನೆ ಕಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಅರ್ಜಿದಾರ ನಡುವೆ ವೈಮನಸ್ಸು ಇರುವುದರಿಂದ ಆತನಿಗೆ ತೊಂದರೆ ಕೊಡಲು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ